ದಿಃ 2.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್.ಕೆ. ವಕೀಲರಿಂದ ,**

1. ನನ್ನ ತಂದೆಯ ತಂದೆ ನಾಗೇಂದ್ರಪ್ಪ ರವರಿಗೆ ಸುಮಾರು 16 ಎಕರೆ ಜಮೀನು ಇತ್ತು. ಸದರಿ ಸ್ವತ್ತುಗಳನ್ನು ನನ್ನ ತಂದೆ ಹಾಗೂ ತಾತ 2012 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗದಲ್ಲಿ ನನ್ನ ತಾತನ ಪಾಲಿಗೆ ಸುಮಾರು 6 ಎಕರೆ ಜಮೀನು, ಒಂದು ಮನೆ ಹಾಗೂ ಒಂದು ನಿವೇಶನ ಹೋಗಿತ್ತು. ಉಳಿಕೆ 9 ಎಕರೆ ವಿಭಾಗದಲ್ಲಿ ನನ್ನ ತಂದೆಯ ಪಾಲಿಗೆ ಬಂದಿತ್ತು ಎಂದರೆ ಸಾಕ್ಷಿ 6 ಎಕರೆ ಮಾತ್ರ ಬಂದಿತ್ತು ಎಂದು ನುಡಿಯುತ್ತಾರೆ. ನನ್ನ ತಾತನಿಗೆ ಒಟ್ಟು 15 ಎಕರೆ 10 ಗುಂಟೆ ಜಮೀನು, ಒಂದು ನಿವೇಶನ ಹಾಗೂ 2 ಮನೆಗಳು ಇದ್ದವು ಎಂದರೆ ಸಾಕ್ಷಿ ಒಂದು ಮನೆ ಮಾತ್ರ ಇತ್ತು ಎಂದು ನುಡಿಯುತ್ತಾರೆ. ಸದರಿ ವಿಭಾಗದಲ್ಲಿ ನನ್ನ ತಂದೆಯ ಪಾಲಿಗೆ 9 ಎಕರೆ ಹಾಗೂ ನನ್ನ ತಾತನ ಪಾಲಿಗೆ 6 ಎಕರೆ 10 ಗುಂಟೆ ಜಮೀನು ಹೋಗಿರುತ್ತದೆ ಎಂದರೆ ಸರಿ. ಸದರಿ ವಿಭಾಗ ದಿಃ 13-12-2012 ರಂದು ನೊಂದಾಯಿತ ವಿಭಾಗ ಪತ್ರದ ಮೂಲಕ ಆಗಿರುತ್ತದೆ ಎಂದರೆ ಸರಿ. ಸದರಿ ವಿಭಾಗದಲ್ಲಿ ಬಂದ ಸ್ವತ್ತಿನ ಪೈಕಿ 3 ಎಕರೆ ಜಮೀನನ್ನು ನನ್ನ ತಂದೆ ವೇಲುಸ್ವಾಮಿ ಎಂಬುವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ನಾಗತಿ ಬೆಳಗಲು ಗ್ರಾಮದ ಸರ್ವೆ ನಂಬರ್ 20 ಹಾಗೂ 21 ರಲ್ಲಿ ಜಮೀನನ್ನು ಉಳಿಸಿಕೊಂಡಿದ್ದರು. ಸದರಿ 2012 ರ ವಿಭಾಗ ಹಾಗೂ ನನ್ನ ತಂದೆ ಕ್ರಯ ಮಾಡಿದ ಸ್ವತ್ತನ್ನು ಯಾರು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ.

2. ನನ್ನ ತಂದೆ 2015 ರಲ್ಲಿ ಮೃತ ಪಟ್ಟಿರುತ್ತಾರೆ. ವಾದಿಗಳು ಹಾಗೂ ಪ್ರತಿವಾದಿಗಳು ನನ್ನ ತಂದೆಯ ಏಕೈಕ ವಾರಸುದಾರರು ಎಂದರೆ ಸರಿ. ನನ್ನ ತಂದೆಯ ಪಾಲಿಗೆ ಇದ್ದ 6 ಎಕರೆ ಜಮೀನನ್ನು ನಾವುಗಳು ದಿಃ 21-03-2022 ರಂದು ನೊಂದಾಯಿತ ವಿಭಾಗ ಪತ್ರದ ಮೂಲಕ ಪಾಲು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಾವುಗಳು

ವಿದ್ಯಾಭ್ಯಾಸ ಮಾಡಿರುತ್ತೇವೆ ಎಂದರೆ ಸರಿ. ನಮಗೆ ವ್ಯವಹಾರ ಜ್ಞಾನ ಇರುತ್ತದೆ. ಸ್ವತ್ತುಗಳ ಸಂಬಂಧ ವ್ಯವಹಾರಗಳು ನನಗೆ ತಿಳಿದಿರುತ್ತದೆ. ಸದರಿ 2012 ರ ವಿಭಾಗ ಪತ್ರದಲ್ಲಿ ಸ್ವತ್ತುಗಳು ಯಾರು ಯಾರಿಗೆ ಸೇರಬೇಕು ಎಂದು ಸ್ಪಷ್ಟವಾಗಿ ಬರೆಯಲಾಗಿದೆ ಎಂದರೆ ಸರಿ. ಸದರಿ 2012 ರ ವಿಭಾಗದಂತೆ ಕಂದಾಯ ದಾಖಲೆಗಳು ನನ್ನ ತಾತ ಹಾಗೂ ತಂದೆಯ ಹೆಸರಿಗೆ ಪ್ರತ್ಯೇಕವಾಗಿ ದಾಖಲಾಗಿದೆ ಎಂದರೆ ಸರಿ. ಅದರಂತೆ ಅವರುಗಳು ತಮ್ಮ ಸ್ವತ್ತುಗಳ ಸಂಬಂಧ ಪ್ರತ್ಯೇಕವಾಗಿ ವ್ಯವಹರಿಸುತ್ತಿದ್ದರು ಎಂದರೆ ಸರಿ.

3. 2022 ರ ವಿಭಾಗದಂತೆ ನಾನು ಹಾಗೂ ನನ್ನ ಸೋದರ ಸೋದರಿಯರು ಅವರುಗಳ ಹಿಸ್ಸೆಗೆ ಬಂದ ಸ್ವತ್ತುಗಳ ಸಂಬಂಧ ಪ್ರತ್ಯೇಕವಾಗಿ ವ್ಯವಹರಿಸುತ್ತಿರುತ್ತೇವೆ ಎಂದರೆ ಸರಿ. ಆ ಪೈಕಿ ನಾನು ಹಾಗೂ 2 ನೇ ವಾದಿ ನಮ್ಮ ಪಾಲಿನ ಸ್ವತ್ತುಗಳನ್ನು ಮಾರಾಟ ಮಾಡಿರುತ್ತೇವೆ. ಆ ಸಮಯ ಸದರಿ ಕ್ರಯಪತ್ರಗಳಿಗೆ ಪ್ರತಿವಾದಿಯರ ಸಹಿಗಳನ್ನು ಪಡೆದಿರುವುದಿಲ್ಲ. ಸದರಿ ಮಾರಾಟ ಮಾಡುವ ಪೂರ್ವದಲ್ಲಿ ಪ್ರತಿವಾದಿಯರ ಒಪ್ಪಿಗೆಯನ್ನು ಪಡೆದಿರುವುದಿಲ್ಲ. ನಮ್ಮ ಸ್ವತ್ತುಗಳ ಸಂಬಂಧ ನಾವು ಸ್ವತಂತ್ರವಾಗಿ ವ್ಯವಹಾರ ಮಾಡಿರುತ್ತೇವೆ ಎಂದರೆ ಸರಿ. ಸದರಿ 2022 ರ ವಿಭಾಗದಂತೆ ನನ್ನ ಹಾಗೂ 2 ನೇ ವಾದಿಯ ಪಾಲಿಗೆ ತಲಾ 1 ½ ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿ. ನಾನು ನನ್ನ ಪಾಲಿನ 1 ½ ಎಕರೆ ಜಮೀನನ್ನು 2025 ನೇ ಸಾಲಿನಲ್ಲಿ ಮಾರಾಟ ಮಾಡಿರುತ್ತೇನೆ. ಆ ಪೂರ್ವದಲ್ಲಿಯೇ 2 ನೇ ವಾದಿ ತನ್ನ ಪಾಲಿನ 1 ½ ಎಕರೆ ಜಮೀನನ್ನು ಮಾರಾಟ ಮಾಡಿದ್ದರು. 2 ನೇ ವಾದಿ ಮೊದಲಿನಿಂದಲೂ ದಾವಣಗೆರೆಯಲ್ಲಿ ಪ್ರತ್ಯೇಕವಾಗಿ ವಾಸ ಇರುತ್ತಾರೆ ಎಂದರೆ ಸರಿಯಲ್ಲ. ನಮ್ಮಗಳಿಗೆ ಪಡಿತರ ಚೀಟಿ ಇರುತ್ತದೆ. ನನ್ನ ತಮ್ಮನ ಪಡಿತರ ಚೀಟಿಯನ್ನು ನಾನು ನೋಡಿರುತ್ತೇನೆ. ನನ್ನ ಹಾಗೂ 2 ನೇ ವಾದಿಯ ಪಡಿತರ ಚೀಟಿ ಬೇರೆ ಬೇರೆ ಇರುತ್ತದೆ ಎಂದರೆ ಸಾಕ್ಷಿ ನನ್ನ ಪಡಿತರ ಚೀಟಿ ಪ್ರತ್ಯೇಕವಾಗಿ ಇದ್ದು, ನನ್ನ ತಮ್ಮ

ಹಾಗೂ ನನ್ನ ತಾಯಿಯ ಪಡಿತರ ಚೀಟಿ ಒಟ್ಟಿಗೆ ಇರುತ್ತದೆ ಎಂದು ನುಡಿಯುತ್ತಾರೆ. ಕಳೆದ 2 ವರ್ಷಗಳಿಂದ ನನ್ನ ಹಾಗೂ ನನ್ನ ತಾಯಿಯ ನಡುವೆ ವಿಶ್ವಾಸ ಇರುವುದಿಲ್ಲ.

4. ನಾನು ಹಾಗೂ 2 ನೇ ವಾದಿ ಅಂತರ್ಜಾತಿ ವಿವಾಹ ಆಗಿರುತ್ತೇವೆ ಎಂದರೆ ಸರಿ. ನನ್ನ ತಾಯಿಯ ವಿರುದ್ಧ ನಾನು ಯಾವುದೇ ಪ್ರಕರಣ ಹೂಡಿರುವುದಿಲ್ಲ. ನನ್ನ ಹೆಂಡತಿಯ ಹೆಸರು ಮಧುಮಾಲ. ಆಕೆಯ ಮೂಲಕ ನಾನು ನನ್ನ ತಾಯಿ ಹಾಗೂ ತಂಗಿಯ ವಿರುದ್ಧ ಜಾತಿನಿಂಧನೆ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ.

5. ನನ್ನ ತಾತ ಮೊದಲಿನಿಂದಲೂ ಗ್ರಾಮದಲ್ಲಿ ಪಟೇಲಿಕೆ ಮಾಡುತ್ತಿದ್ದರು ಎಂದರೆ ಸರಿ. ಗ್ರಾಮದ ಪಂಚಾಯತಿಗಳಲ್ಲಿ ಅವರು ಭಾಗವಹಿಸುತ್ತಿದ್ದರು ಎಂದರೆ ಸರಿ. ಅವರು ಗ್ರಾಮದಲ್ಲಿ ಗ್ರಾಮಸ್ಥರಿಗೆ ದಾಖಲೆಗಳ ಸಂಬಂಧ ಮಾಹಿತಿ ನೀಡಿ ತಿಳುವಳಿಕೆ ಹೇಳುತ್ತಿದ್ದರು ಎಂದರೆ ಸರಿ. ಅವರಿಗೆ ಉತ್ತಮ ವ್ಯವಹಾರ ಜ್ಞಾನ ಇತ್ತು ಎಂದರೆ ಸಾಕ್ಷಿ ಅವರಿಗೆ ವಯಸ್ಸಾದ ನಂತರ ಅನಾರೋಗ್ಯ ಪೀಡಿತರಾಗಿದ್ದರು ಎಂದು ನುಡಿಯುತ್ತಾರೆ. ಅವರು 2015 ರ ನಂತರ ಅನಾರೋಗ್ಯಕ್ಕೆ ತುತ್ತಾಗಿರುತ್ತಾರೆ.

6. ನಾನು ಆಸ್ತಿ ಸಂಬಂಧ ನನ್ನ ತಾತನಿಗೆ ತೊಂದರೆ ನೀಡುತ್ತಿದ್ದೆನು ಎಂದು ಆರೋಪಿಸಿ ನನ್ನ ತಾತ ಭದ್ರಾವತಿಯ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಅವರು ನನ್ನ ವಿರುದ್ಧ ರಕ್ಷಣೆ ಕೋರಿ ಹಿರಿಯ ನಾಗರೀಕರ ರಕ್ಷಣಾ ವೇದಿಕೆಗೆ ಸಹ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿಯ ಮೇಲೆ ಕ್ರಮ ಕೈಗೊಳ್ಳುವಂತೆ ಶಿವಮೊಗ್ಗದ ಉಪವಿಭಾಗಾಧಿಕಾರಿಗಳು

ಆದೇಶ ಮಾಡಿದ್ದರು ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ.ಶ್ರೀಕಾಂತ್)**
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**